ಆರ್ಬಿಟ್,ಹುಮನಾಬಾದ
ಸಮಾಜ ಸೇವಾ ಸಂಸ್ಥೆ, NH 65 ರೈಲ್ವೇ ನಿಲ್ದಾಣದ ಹತ್ತಿರ
ಹುಮ್ನಾಬಾದ ತಾಲೂಕು, ಬೀದರ್ ಜಿಲ್ಲೆ, ಕರ್ನಾಟಕ, 585330

ಸೇವಾ ಸಂಗಮ ಸಂಸ್ಥೆ, ಕಲಬುರಗಿ
ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಕೇಂದ್ರೀಯ ವಿದ್ಯಾಲಯ
ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ 585102

# ಸೇವಾವಾಣಿ

ಮೇ / May 2025





ಪೂಜ್ಯ. ಡಾ॥ ರಾಬರ್ಟ್ ಮೈಕಲ್ ಮಿರಂದಾ
ಧರ್ಮಾಧ್ಯಕ್ಷರು, ಗುಲ್ಬರ್ಗಾ ಧರ್ಮಕ್ಷೇತ್ರ

ವಂ. ಫಾ॥ ವಿಕ್ಟರ್ ವಾಸ್ ನಿರ್ದೇಶಕರು,
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ, ಗುಲ್ಬರ್ಗಾ

## "ಬೆಳವಣಿಗೆ ಕುಂಠಿತ ವಿರುವ ಮಕ್ಕಳಿಗೆ ಸಾಧನೆ ಸಲಕರಣೆ ವಿತರಣಾ ಕಾರ್ಯಕ್ರಮ"

ದಿನಾಂಕ 11 ಏಪ್ರಿಲ್ 2025ರಂದು ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಎ.ಪಿ.ಡಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆ ಕುಂಠಿತ ವಿರುವ ಮಕ್ಕಳಿಗೆ ಸಾಧನೆ ಸಲಕರಣೆ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ವಿಕ್ಟರ್ ವಾಸರವರು ಮಾತನಾಡುತ್ತಾ ಆರೋಗ್ಯವೇ ಭಾಗ್ಯ ಆರೋಗ್ಯ ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯ. ಅನಾರೋಗ್ಯದಲ್ಲಿದ್ದಾಗ ಸಮಯ ವ್ಯರ್ಥ ಮಾಡದೆ ವೈಜ್ಞಾನಿಕವಾಗಿ ಚಿಕಿತ್ಸೆ ಪಡೆದು ಆರೋಗ್ಯದಲ್ಲಿ ಸುಧಾರಣೆ ಮಾಡಿಕೊಂಡು ಸಮುದಾಯ ಸಮಾಜದಲ್ಲಿ ಮುಂದೆ ಬರಲು ಎಲ್ಲರೂ ಪ್ರಯತ್ನಿಸಬೇಕೆಂದು ಹುರಿದುಂಬಿಸಿದರು. ಬೆಳವಣಿಗೆ ಕುಂಠಿತವಿರುವ ಮಕ್ಕಳಿಗಾಗಿ ನಮ್ಮ ಸಂಸ್ಥೆ ಸದಾಕಾಲ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದ್ದು ಮುಂದಿನ ದಿನಗಳಲ್ಲಿಯೂ ಕೂಡ ಸಂಸ್ಥೆಯು ತಮ್ಮೆಲ್ಲರಿಗಾಗಿ ಸದಾ ಸಿದ್ಧವಿರುತ್ತದೆ ಎಂದು ಭರವಸೆಯ ನುಡಿಯನ್ನು ನುಡಿದರು. ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟಿನ ರವರು ಮಕ್ಕಳನ್ನು ಉದ್ದೇಶಿಸಿ ಮಾತನಾಡುತ್ತಾ ಬೆಳವಣಿಗೆ ಕುಂಠಿತವಿರುವ ಮಕ್ಕಳನ್ನು ಕಾಪಾಡುವುದು ಪೋಷಕರ ಜವಾಬ್ದಾರಿ ಹೆಚ್ಚಿನದು ಎಂದು ಪೋಷಕರಿಗೆ ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ನಾಲ್ಕು ಮಕ್ಕಳಿಗೆ ನಡೆಯುವ ಸಮಸ್ಯೆವಿದ್ದು ಅಂತ ಮಕ್ಕಳನ್ನು ಗುರುತಿಸಿ ಅವರಿಗೆ ಬೇಕಾದ ಸಾಧನೆ ಸಲಕರಣೆಗಳನ್ನು ವಿತರಿಸಿದರು. ಇದೇ ಸಂದರ್ಭದಲ್ಲಿ ಸಹ ನಿರ್ದೇಶಕರಾದ ಫಾದರ್ ವಿಜಯ್ ಕುಮಾರ್ ಸಂಸ್ಥೆಯ ಸಂಯೋಜಕರಾದ ಶ್ರೀ ಪ್ರವೀಣ್ ಹಾಗೂ ಶ್ರೀ ಸದಾನಂದ ಮತ್ತು ಸಿಬ್ಬಂದಿ ವರ್ಗದವರು ಫಲಾನುಭವಿಗಳು ಸೇರಿ ಒಟ್ಟು 85 ಜನರು ಉಪಸ್ಥಿತರಿದ್ದರು.







@Orbitbidar | @orbithumnabad
@Sevasangama Kalaburagi @sevasangama01 www.sevasangama.in 897 111 9914

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ರೋಶನಿ ವಿಶೇಷ ಚೇತನರ ಸಂಘದ ಸಭೆ”ಕುರಿತು



ದಿನಾಂಕ 03 ಏಪ್ರಿಲ್ 2025ರಂದು ಹುಮ್ನಾಬಾದ್ ತಾಲೂಕಿನ ಸೇಡೊಳ ಗ್ರಾಮದಲ್ಲಿ ರೋಶನಿ ವಿಶೇಷ ಚೇತನರ ಸಂಘದ ಸಭೆಯು ಮಾಡಲಾಯಿತು. ಸರಿಯಾಗಿ ಬೆಳಿಗ್ಗೆ 11:00 ಗಂಟೆಗೆ ಸಭೆಯಲ್ಲಿ ಚರ್ಚೆ ಮಾಡಿದ್ದ ವಿಷಯಗಳು: ಪ್ರತಿಯೊಬ್ಬರು ತಿಂಗಳಿಗೆ ಸಂಘದ ಸಭೆಯಲ್ಲಿ ಭಾಗವಹಿಸಬೇಕು. ಮತ್ತು ಪ್ರತಿಯೊಬ್ಬರು 100 ನೂರುಪಾಯಿ ಸಂಘದಲ್ಲಿ ಉಳಿತಾಯ ಮಾಡಬೇಕು. ಸಂಘದಿಂದ ಸರ್ಕಾರಿ ಸೌಲಭ್ಯಗಳು ಬಗ್ಗೆ, ಜಾಬ್ ಕಾರ್ಡ್, ಯು.ಡಿ.ಐ.ಡಿ ಕಾರ್ಡ್, ರೇಷನ್ ಕಾರ್ಡ್ ಹೊಸದಾಗಿ ಮಾಡಿಸಿಕೊಳ್ಳಲು ಮತ್ತು ಉದ್ಯೋಗ ಖಾತ್ರಿ ಕೆಲಸದಲ್ಲಿ ಭಾಗವಹಿಸಲು ಗ್ರಾಮ ಪಂಚಾಯತ್ ಹೋಗಿ ಕೆಲಸವನ್ನು ಕೇಳಿ ಪಡೆಯಿರಿ. ಜಾಬ್ ಕಾರ್ಡ್ ಇದ್ದವರು ಒಂದು ವೇಳೆ ಜಾಬ್ ಕಾರ್ಡ್ ಬ್ಲಾಕ್ ಆಗಿದ್ದರೆ, ಅದನ್ನು ಸರಿಪಡಿಸಿಕೊಳ್ಳಿರಿ ಎಂದು ಸಭೆಯಲ್ಲಿ ಮಾಹಿತಿ ತಿಳಿಸಲಾಯಿತು. ಹೆಚ್ಚಿನ ಮಾಹಿತಿಗಾಗಿ ಈ ನಂಬರಿಗೆ ಕರೆ ಮಾಡಿ 9036664271 ಸೂಕ್ತ ಸಲಹೆ ಪಡೆದುಕೊಳ್ಳಿ ಎಂದು ತಿಳಿಸಲಾಯಿತು. ಈ ಸಭೆಯಲ್ಲಿ 6 ಜನ ಫಲಾನುಭವಿಗಳು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರ ಬಗ್ಗೆ ಜಾಗೃತಿ ಕಾರ್ಯಕ್ರಮ”



ದಿನಾಂಕ 08 ಏಪ್ರಿಲ್ 2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಕೆ) ವಾಡಿ ಗ್ರಾಮದ ಹನುಮಂತ ಮಂದಿರದಲ್ಲಿ ಆರ್ಬಿಟ್ ಸಂಸ್ಥೆಯ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ನೇತೃತ್ವದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಶ್ರೀಮತಿ ಮಾಹಾದೇವಿ ಇವರು ಗ್ರಾಮಸ್ಥರಿಗೆ ಮಾನಸಿಕ ಅಸ್ವಸ್ಥರ ಕಾಯಿಲೆಯ ಲಕ್ಷಣಗಳ ಬಗ್ಗೆ ತಿಳಿಸಿದರು. ಕಾರಣವಿಲ್ಲದೆ ನಗುವುದು, ದಾರಿಯಲ್ಲಿ ಹೋಗುವವರನ್ನು ಕಂಡು ಕೆಟ್ಟ ಕೆಟ್ಟ ಮಾತನಾಡುವರು, ಕಲ್ಲಿಂದ ಹೊಡೆಯೋದು, ಪದೇಪದೇ ಕೈ ತೊಳೆದುಕೊಳ್ಳೊದು, ಕಾಲು ತೊಳೆದುಕೊಳ್ಳೊದು ಇಂತಹ ಲಕ್ಷಣಗಳ ಕಂಡುಬಂದಲ್ಲಿ ಅವರಿಗೆ ಉಚಿತವಾಗಿ ಔಷಧಿ ಇದೆ. ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 10 ಗಂಟೆಗೆ ಪ್ರತಿ ಬುಧವಾರ ಡಾಕ್ಟರ್ ತಪಾಸಣೆ ಮಾಡುತ್ತಾರೆ. ಮತ್ತು ಒಂದು ತಿಂಗಳ ಔಷಧಿ ಕೊಡುತ್ತಾರೆ ಅವರಿಗೆ ಔಷಧಿಯನ್ನು ಪ್ರತಿ ತಿಂಗಳಿಗೆ ಒಂದು ಸಾರಿ ತೆಗೆದುಕೊಂಡು ಹೋಗುವ ಹಾಗೆ ನೋಡಿಕೊಳ್ಳಬೇಕು. ಮತ್ತು ಸರಿಯಾದ ಸಮಯಕ್ಕೆ ಮಾತ್ರೆಗಳನ್ನು ಸೇವಿಸಬೇಕು. ದಿನಾ ಸ್ನಾನ ಮಾಡಿಸಬೇಕು ಎಂದು ತಿಳಿಸಿದರು.

## “ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಮಾನಸಿಕ ಅಸ್ವಸ್ಥರ ಶಿಬಿರ ಕಾರ್ಯಕ್ರಮ”ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 16 ಏಪ್ರಿಲ್ 2025 ರಂದು ಹುಮ್ನಾಬಾದ್ ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಖಚಿತ ಮಾನಸಿಕ ಅಸ್ವಸ್ಥರ ಶಿಬಿರ ಕಾರ್ಯಕ್ರಮ ಹಾಗೂ ಯು.ಡಿ.ಐ.ಡಿ ಕಾರ್ಡ್ ಮಾಡಿಸುವ ಕುರಿತು ಶಿಬಿರವನದನು ಹಮ್ಮಿಕೊಳ್ಳಲಾಯಿತು. ಇದರಲ್ಲಿ ಡಾ. ರಿತೇಶ್ ಮನೋ ತಜ್ಞ ವೈದ್ಯರು ಬಂದಂತಹ 34 ಮಾನಸಿಕ ಅಸ್ವಸ್ಥರನ್ನು ಚಿಕಿತ್ಸೆ ಹಾಗೂ ಯು.ಡಿ.ಐ.ಡಿ ಫಲಾನುಭವಿಗಳಿಗೆ ತಕ್ಕ ಪ್ರತಿಶತ ನೀಡಿದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯರಾದ ಶ್ರೀಮತಿ ಪ್ರೀತಿ ಪೂಜಾ ಹಾಗೂ ಮಹಾದೇವಿಯವರು ಫಲಾನುಭವಿಯ ಚಿಕಿತ್ಸೆ ಹಾಗೂ ಮಾತ್ರೆಗಳನ್ನು ಪಡೆದುಕೊಳ್ಳುವಲ್ಲಿ ಸಹಾಯ ಮಾಡಿದರು ಮತ್ತು ಯು.ಡಿ.ಐ.ಡಿ ಕ್ಯಾಂಪ್ ಗೆ ಬಂದ ಫಲಾನುಭವಿಗಳನ್ನು ಮಾರ್ಗದರ್ಶನ ನೀಡಿದರು.

## “ಕೇಂದ್ರ ಆಧಾರಿತವಾಗಿ ಆಪ್ತ ಸಮಾಲೋಚನೆ”





ದಿನಾಂಕ 24 ಏಪ್ರಿಲ್ 2025ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರ್ ಗ್ರಾಮದಲ್ಲಿ ಸವಿತಾ ಅವರ ಕುಟುಂಬದಲ್ಲಿ ಆಪ್ತ ಸಮಾಲೋಚನೆಯನ್ನು ಹಮ್ಮಿಕೊಳ್ಳಲಾಯಿತು. ಆಪ್ತ ಸಮಾಲೋಚನೆಯೂ ಕೇಂದ್ರ ಆಧಾರಿತವಾಗಿದ್ದು ಎಲ್ಲಾ ಫಲಾನುಭವಿಗಳು ಆಪ್ತ ಸಮಾಲೋಚನೆ ಸಭೆಗೆ ಸೇರಿದರು. ಅನೇಕ ಫಲಾನುಭವಿಗಳು ಸದ್ಯದ ಸ್ಥಿತಿಗತಿಗಳು, ಅನೇಕ ಸಭೆ ಸಂಭ್ರಮಗಳು ಮದುವೆ ಹಾಗೂ ಇತನ ಕೂಟಗಳು ನಡಿತಾ ಇದೆ. ಕರೆದುಕೊಂಡು ಹೋಗುತ್ತಿದ್ದಾರೆ. ಅಲ್ಲಿ ಅನೇಕ ಪ್ರೀತಿಯ ಊಟ ಉಪಚಾರಗಳು. ಅವಕಾಶ ಸಿಗುತಿದೆ. ಆಪ್ತ ಸಮಾಲೋಚನೆಯಿಂದ ನಮಗೆ ಬಹಳಷ್ಟು ಧೈರ್ಯ ಮತ್ತು ನಂಬಿಕೆ ವಿಶ್ವಾಸವನ್ನು ಹೆಚ್ಚಿಸಿಕೊಂಡಿದ್ದೇವೆ. ಅನೇಕ ದಿನನಿತ್ಯ ಕೆಲಸದಲ್ಲಿ ಪಾಲ್ಗೊಂಡಿದ್ದೇವೆ. ಸಣ್ಣ ಪುಟ್ಟ ಕೆಲಸದಲ್ಲಿ ತೊಡಗಿದ್ದೇವೆ. ಭಯ ಆತಂಕ ಕೆಲವು ವರ್ತನೆಗಳು ಕಡಿಮೆಯಾಗಿವೆ. ಮನೋವೈದ್ಯರ ಸಲಹೆ ಸೂಚನೆಯನ್ನು ಪಾಲಿಸುತ್ತಿದ್ದೇವೆ. ಆಪ್ತ ಸಮಲೋಚಿನಲ್ಲಿ ಭಾಗವಹಿಸುತ್ತಿದ್ದೇವೆ ಹೀಗೆ ಅನೇಕ ಪ್ರೀತಿಯಿಂದ ನಮಗೆ ಬಹಳ ಸಾಹಕಾರ ಆಗುತ್ತಿದೆ ಆದ್ದರಿಂದ ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೂ ಆಪ್ತ ಸಮಾಲೋಚಕರಿಗು ನನ್ನ ಕುಟುಂಬದ ಪರವಾಗಿ ನಿಮಗೆ ತುಂಬು ಹೃದಯದ ಧನ್ಯವಾದಗಳು ತೀಳಿಸಿದ್ದರು.

## “ವಿಕಲಚೇತನರ ಸಂಘಗಳು ವಿಶ್ವಾಸದಿಂದ ವಿಶ್ವಾಸದಡೆಗೆ”



ಚಿಟಗುಪ್ಪ ತಾಲೂಕಿನ ತಲಾಬ ಗಲ್ಲಿಯಲ್ಲಿ ಮಹಬೂಬ್ ಉಸ್ಮಾನಿ ವಿಕಲಚೇತನರ ಸಂಘದ ಸಭೆಯು ದಿನಾಂಕ 15 ಏಪ್ರಿಲ್ 2025ರಂದು ಜರುಗಿತು. ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಹಾಗು 5 ಜನ ಸದಸ್ಯರು ಭಾಗವಹಿಸಿದ್ದರು. ಈ ಸಭೆಯಲ್ಲಿ ಉಳಿತಾಯ ಮಾಡುವ ಕುರಿತು ಮತ್ತು ಸಂಘದ ಉಳಿತಾಯ ಮಾಡುವುದರಿಂದ ಸಂಘವು ಆರ್ಥಿಕವಾಗಿ ಬಲಗೊಳ್ಳುವದು. ಎಂಬುವುದರ ಕುರಿತು ಸಭೆಯಲ್ಲಿ ಚರ್ಚೆ ಮಾಡಿದರು. ರೈಮಾನ್ ಶಾ ರವರ ಅಭಿಪ್ರಾಯದಂತೆ ಬರುವ ತಿಂಗಳಿನಿಂದ ಉಳಿತಾಯವನ್ನು ಆರಂಭಿಸಿಲು ನಿರ್ಧಾರ ಕೈಗೊಂಡರು. ಹಾಗೆ ಪ್ರತಿಯೊಬ್ಬರೂ ಪ್ರತಿಯೊಂದು ಸದಸ್ಯರು ನೂರು ರೂಪಾಯಿ ಉಳಿತಾಯ ಮಾಡಲು ನಿರ್ದಾರ ಕೈಗೊಂಡರು. ಕೊನೆಯಲ್ಲಿ ಶಕೀಲ ರವರ ವಂದನಾರ್ಪಣೆಯೊಂದಿಗೆ ಅಂದಿನ ಸಭೆ ಮುಕ್ತಾಯಗೊಂಡಿತು. ಈ ಸಭೆಯಲ್ಲಿ 05 ಜನರು ಭಾಗವಹಿಸಿದರು.

## "ಪರಿಮಳ ವಿಶೇಷ ವಿಕಲಚೇತನರ ಸಂಘದ ಸಭೆ"



ದಿನಾಂಕ 26 ಏಪ್ರಿಲ್ 2025ರಂದು ಚಿಟಗುಪ್ಪ ತಾಲೂಕಿನ ಮಂಗಲಗಿ ಗ್ರಾಮದ ಪರಿಮಳ ವಿಶೇಷ ವಿಕಲಚೇತನರ ಸಂಘಕ್ಕೆ ಭೇಟಿ ನೀಡಿ ಸಂಘದ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ನಾಲ್ಕು ಜನ ಸದಸ್ಯರು ಭಾಗವಹಿಸಿರುತ್ತಾರೆ. ಈ ಸಭೆಯಲ್ಲಿ ಯು.ಡಿ.ಐ.ಡಿ ಕಾರ್ಡ್ ಎಂದರೇನು ಮತ್ತು ಅದನ್ನು ಹೇಗೆ ಪಡೆದುಕೊಳ್ಳಬೇಕು. ಯು.ಡಿ.ಐ.ಡಿ ಕಾರ್ಡ್ ನಿಂದ ಸಿಗುವ ಸೌಲಭ್ಯಗಳ ಕುರಿತು ಸಂಪೂರ್ಣ ಮಾಹಿತಿ ನೀಡಲಾಯಿತು. ತದನಂತರ ವಿಕಲಚೇತನರಿಗೂ ಮತ್ತು ಮಾನಸಿಕ ಅಸ್ವಸ್ಥರಿಗೂ ಸರಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಸಂಪೂರ್ಣ ಮಾಹಿತಿ ನೀಡಲಾಯಿತು.



ದಿನಾಂಕ 16 ಏಪ್ರಿಲ್ 2025ರಂದು ಹುಮ್ನಾಬಾದ್ ತಾಲೂಕಿನ ಸಕ್ಕರಗಂಜ್ ಗ್ರಾಮಕ್ಕೆ ಭೇಟಿ ನೀಡಿ ಮಲ್ಲಿಗೆ ವಿಶೇಷ ವಿಕಲಚೇತನರ ಸಂಘದ ಸಭೆ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಡೇವಿಡ್ ಅವರು ಸಂಘದ ಸದಸ್ಯರಿಗೆ ಯು.ಡಿ.ಐ.ಡಿ ಕಾರ್ಡ ಯಾವ ರೀತಿ ಪಡೆಯಬೇಕು ಹಾಗೂ ಅರ್ಜಿ ಸಲ್ಲಿಸಲು ಯಾವ ಯಾವ ದಾಖಲೆಗಳು ಬೇಕು ಮತ್ತು ಹೇಗೆ ಸಲ್ಲಿಸಬೇಕು ಎಂಬುದರ ಕುರಿತು ಸಂಘದ ಸದಸ್ಯರಿಗೆ ಸಂಪೂರ್ಣವಾದ ಮಾಹಿತಿ ನೀಡಲಾಯಿತು. ಮಾಹಿತಿ ಪಡೆದುಕೊಂಡ ಸಂಘದ ಸದಸ್ಯರೆಲ್ಲರೂ ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೂ, ಸಂಯೋಜಕರು ಮತ್ತು ಕಾರ್ಯಕರ್ತರಿಗೂ ಧನ್ಯವಾದಗಳು ತಿಳಿಸಿದರು.

# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ಸಂವಿಧಾನ ಸಂರಕ್ಷಣೆ– ಪ್ರಜಾಪ್ರಭುತ್ವ ಮಹತ್ವ"





26 ಏಪ್ರಿಲ್ 2025ರಂದು ದಾವಣಗೆರೆ ಜಿಲ್ಲೆಯಲ್ಲಿ ಸಂವಿಧಾನ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಬುದ್ಧಿಜೀವಿಗಳು ಭಾರತ ದೇಶದ ಪ್ರತಿಯೊಬ್ಬ ಪ್ರಜೆಯೂ ನಮ್ಮ ದೇಶದ ಸಂವಿಧಾನದ ಮೂಲ ಆಶಯದಂತೆ ಬದುಕು ನಡೆಸಬೇಕು. ಸಂವಿಧಾನದಿಂದಲೇ ದೇಶದ ಸುವ್ಯವಸ್ಥೆಗಳಾದ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು ಜನರಿಗೆ ಮೂಲಭೂತ ಹಕ್ಕುಗಳು ದೊರೆಯುತ್ತವೆ ಮಾಡಿದೆ. ನಮ್ಮ ದೇಶದ ಸಂವಿಧಾನ ಪ್ರಜಾಪ್ರಭುತ್ವ ಮತ್ತು ಎಲ್ಲರೂ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು ಮಹತ್ತರವಾದ ಜವಾಬ್ದಾರಿಯಾಗಿದೆ. ದೇಶಕ್ಕಾಗಿ ದಿನದಲಿತರಿಗಾಗಿ ಮತ್ತು ಅಲ್ಪಸಂಖ್ಯಾತರಿಗಾಗಿ, ಹಿಂದುಳಿದವರು ಮತ್ತು ಆದಿವಾಸಿಗಳಿಗೆ ಮೊದಲಾದವರು ಕೂಡ ಒಟ್ಟುಗೂಡಿಸಬೇಕು ಹಾಗೂ ಸಂವಿಧಾನ ರಕ್ಷಣೆಯ ಜವಾಬ್ದಾರಿ ಹೊರಬೇಕು ಎಂದು ಈ ಸಭೆಯಲ್ಲಿ ತಿಳಿಸಲಾಯಿತು.

## "ಬೆಳವಣಿಗೆಯಿಂದ ಕುಂಠಿತವಿರುವ ಮಕ್ಕಳಿಗೆ ಕೇಂದ್ರದಲ್ಲಿ ಚಟುವಟಿಕೆ ಹಾಗೂ ಸರಕಾರದ ಸೌಲಭ್ಯ"





ಏಪ್ರಿಲ್ 05 2025ರಂದು ಹುಮ್ನಾಬಾದ್ ಪಟ್ಟಣದ ಆರ್ಬಿಟ್ ಸಂಸ್ಥೆ ಕೇಂದ್ರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಬೆಳವಣಿಗೆಯಿಂದ ಕುಂಠಿತ ಹೊಂದಿದ 6 ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಕೇಂದ್ರದಲ್ಲಿ ಮಾತು ಬರದೆ ಇರುವ ಮಕ್ಕಳಿಗೆ ಸರಳ ವಾಕ್ಯಗಳನ್ನು ಜೋಡಿಸಿ ಅಮ್ಮ, ಅಪ್ಪ ಅನ್ನೊ ಶಬ್ದದಿಂದ ಮಾತಾಡಿಸೋದನ್ನು ಹೇಳಿಕೊಡಲಾಯಿತು. ಬಣ್ಣ ಬಣ್ಣದ ವಸ್ತುಗಳ ಹೆಸರು ಗುರುತಿಸುವುದು, ಬಲೂನ್ ಊದಿಸುವುದು, ಅಂಕಿ ಸಂಖ್ಯೆಗಳನ್ನು ಜೋಡಿಸಿಡುವುದು, ಪ್ರಾಣಿಗಳ ಚಿತ್ರವನ್ನು ಗುರುತಿಸುವುದು ಹಾಗೂ ಶಬ್ದ ಮಾಡುವ ಚಟುವಟಿಕೆಯನ್ನು ಮಾಡಿಸಲಾಯಿತು. ಕತ್ತು ಕೂರದೆ ಇರುವ ಮಕ್ಕಳಿಗೆ ತಲೆ ಮತ್ತು ಎದೆಯ ಮೇಲಿನ ಭಾಗವನ್ನು ಎತ್ತುವುದು, ಹಸ್ತವನ್ನು ಚಾಚಿ ವಸ್ತುಗಳನ್ನು ಹಿಡಿದುಕೊಳ್ಳುವುದು, ಸ್ವಂತ ಹೆಸರಿಂದ ಪ್ರತಿಕ್ರಿಯಿಸುವುದನ್ನು, ಕುಳಿತುಕೊಳ್ಳುದಕ್ಕೆ ಬರದೆ ಇರುವ ಮಕ್ಕಳಿಗೆ ಗೋಡೆಯ ಹಾಗು ಕೈಗಳ ಸಹಾಯದಿಂದ ಕುಳಿತುಕೊಳ್ಳುವುದು, ಸಣ್ಣ ಸಣ್ಣ ವಸ್ತುಗಳನ್ನು ಎತ್ತಿಕೊಳ್ಳುವುದು, ಈ ರೀತಿ ಚಟುವಟಿಕೆ ಮಾಡುವುದಾಗಿ ಪೋಷಕರಿಗೆ ಹೇಳಿ ಕೊಡಲಾಯಿತು. ಮಕ್ಕಳಿಗೆ ನಡೆಯಲು ವಿವಿಧ ಸಾಧನಗಳಾದ ರೋಲೆಟರ್, ದಾರ ಕಟ್ಟಿ ಹಿಡಿದುಕೊಂಡು ನಡೆಯೋದು, ಪೋಷಕರ ಕೈ ಹಾಗೂ ದುಪ್ಪಟ ಹಿಡಿದುಕೊಂಡು ಹೆಜ್ಜೆಗಳ ಗುರುತಿನ ಮೇಲೆ ನಡೆಸುವ ಚಟುವಟಿಕೆ ಮಾಡಿಸಲಾಯಿತು. ಏಪ್ರಿಲ್ ತಿಂಗಳಲ್ಲಿ 3 ಮಕ್ಕಳಿಗೆ ಸರಕಾರದಿಂದ ಯು.ಡಿ.ಐ.ಡಿ ಕಾರ್ಡ್ ಮಾಡಿಸಿಕೊಡಲಾಯಿತು.

# “ನವಜೀವನ (ಎಲ್.ಎಲ್.ಎಲ್.ಏಫ್) ಕಾರ್ಯಕ್ರಮ”

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 05 ಏಪ್ರಿಲ್ 2025ರಂದು ಭಾಲ್ಕಿ ತಾಲೂಕಿನ ಭಾಡಸಾಂಗವಿ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಏಫ್ ಕಾರ್ಯಕರ್ತರಾದ ಶ್ರೀ ಪ್ರದೀಪ್ ಅವರು ಮಾತನಾಡಿದರು. ಒಂದು ವ್ಯಕ್ತಿಗೆ ಮಾನಸಿಕ ರೋಗ ಹೇಗೆ ಬರುತ್ತದೆ ಎಂಬುದಾಗಿ ತಿಳಿಸಿದರು. ಅಂದರೆ ಒಂದು ವ್ಯಕ್ತಿಯ ಜೀವನದಲ್ಲಿ ಆದಂತ ಕಹಿ ಘಟನೆಯನ್ನು ಪುನಃ ಪುನಃ ನೆನಪು ಮಾಡಿ ಖಿನ್ನತೆಗೆ ಒಳಗಾಗಿ ಮಾನಸಿಕ ರೋಗಕ್ಕೆ ತುತ್ತಾಗಿರುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ, ಮೆದುಳಿನಲ್ಲಿ ಇರುವಂತಹ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ಅಥವಾ ಏರುಪೇರು ಉಂಟಾದಾಗ ಮನುಷ್ಯನು ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗದ ಲಕ್ಷಣಗಳೆಂದರೆ ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸುವುದು, ಅನುಮಾನ ಪಡುವುದು, ಕೋಪ ಮಾಡಿಕೊಳ್ಳುವುದು, ಯಾರಿಗೆ ಕೇಳಿಸಲಾರದಂತ ಶಬ್ದವನ್ನು ಕೇಳಿಸುವುದು ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡು ಬಂದರೆ ವೈದ್ಯರ ಸಲಹೆ ಪಡೆಯುವುದು ಹಾಗೂ ತಿಂಗಳಿನ ಎರಡನೇ ಮಂಗಳವಾರ ಭಾಲ್ಕಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ. ಈ ಶಿಬಿರದಲ್ಲಿ ಬಂದು ಉಚಿತ ಚಿಕಿತ್ಸೆಯನ್ನು ಪಡೆಯಬಹುದು. ಇಂಥ ಲಕ್ಷಣ ಇರುವವರಿಗೆ ಕಂಡು ಬಂದರೆ ನಮ್ಮ ಸಂಸ್ಥೆಯ ಸಹಾಯವಾಣಿಯಾದಂತಹ 9036664271 ಕರೆ ಮಾಡಿ ಮಾಹಿತಿ ನೀಡುವುದು ಎಂದು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 25 ಜನ ಭಾಗಿಯಾಗಿದ್ದರು.

## “ಮಾನಸಿಕ ಕಾಯಿಲೆಯ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 04 ಏಪ್ರಿಲ್ 2025ರಂದು ಔರಾದ್ ತಾಲೂಕಿನ ನಾಗಮಾರಪಳ್ಳಿ ಗ್ರಾಮದಲ್ಲಿ ಎಲ್.ಎಲ್.ಎಲ್.ಏಫ್ ಕಾರ್ಯಕ್ರಮದ ಕಾರ್ಯಕರ್ತರಾದ ಸುಕ್ಕು ಅವರಿಂದ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆ ಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಇದು ಒಂದು ಮೆದುಳಿನ ಕಾಯಿಲೆಯಾಗಿದ್ದು ಈ ಕಾಯಿಲೆಯವರು ಎಲ್ಲರಿಗೂ ಬರಬಹುದು ಈ ಕಾಯಿಲೆಯು ಬಂದಂತ ವ್ಯಕ್ತಿಗಳ ನಡುವಳಿಕೆ ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನು ಮಾತನಾಡುವದು, ಮಾಡುವುದು ನಿದ್ದೆ ಮಾಡುವುದು, ವಿನಾಕಾರಣ ನಗುವುದು, ವಿನಾಕಾರಣ ಅಳುವುದು, ವಿನಾಕಾರಣ ಸಿಟ್ಟು ಮಾಡುವದು. ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಇಂತಹ ವ್ಯಕ್ತಿಗಳನ್ನು ಮತ್ತೆ ಸಮಾಜದಲ್ಲಿ ಬದುಕು ಕಟ್ಟಿಕೊಳ್ಳುವಂತೆ ನಮ್ಮವರು ಸಮಾಜ ಸೇವೆ ಮಾಡುತ್ತಿದೆ ಇದರ ಮುಖ್ಯ ಉದ್ದೇಶವೇನಂದರೆ ಅವರು ಕೂಡ ಸಮಾಜದಲ್ಲಿ ಒಳ್ಳೆ ಜೀವನ ನಡೆಸಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ. ಹೀಗೆ ಮಾನಸಿಕ ಹೊಂದಿರುವ ವ್ಯಕ್ತಿಯನ್ನು ಮೂಢನಂಬಿಕೆಗೆ ಬಲಿಯಾಗದೆ ಅವರಿಗೆ ಸರಿಯಾಗಿ ಚಿಕಿತ್ಸೆ ಕೊಡುವದರ ಮೂಲಕ ಅವರು ಸ್ವಲ್ಪವಾಗಿ ಬದಲಾವಣೆಯನ್ನು ಹೊಂದಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 16 ಜನರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರ ಪಾಲಕರ ಸಭೆ”



ದಿನಾಂಕ 7 ಏಪ್ರಿಲ್ 2025ರಂದು ಕಮಲನಗರ ತಾಲೂಕಿನ ಕೋರಿಯಲ್ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಪಾಲಕರ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಮಾನಸಿಕ ಆಸ್ವಸ್ಥರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳಾದ udid ಕಾರ್ಡ್ ಕುರಿತು ಹಾಗೂ ಎಲ್ಲಾ ಫಾನುಭವಿಗಳಿಗೆ ಸರಿಯಾಗಿ ಆರೈಕೆ ಮಾಡುವಂತೆ ತಿಳಿಸಿದರು. ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಬಂದು ವೈದ್ಯರ ಸಲಹೆ ಪ್ರಕಾರ ಮಾತ್ರಗಳನ್ನು ಸೇವಿಸಬೇಕು. ಸರಿಯಾಸ ಸಮಯಕೆ ಊಟ ಮಾಡಿಸಬೇಕು. ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳಬೇಕು ಎಂದು ಅರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಕುಮಾರಿ ಸಂಗೀತಾ ರವರು ಸಂಪೂರ್ಣ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 7 ಜನ ಪಾಲಕರ ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥತೆಯ ಕುರಿತು ಕಾರ್ಯಕ್ರಮ”





ದಿನಾಂಕ 8 9 ಏಪ್ರಿಲ್ 2025ರಂದು ಚಂಡೂರಿ ಮತ್ತು ತಪ್ಪಲ ಗ್ರಾಮಗಳಲ್ಲಿ ಎಲ್.ಎಲ್.ಎಲ್.ಏಫ್ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರಿ ಸಂಗೀತ ರವರು ಮಾನಸಿಕ ಅಸ್ವಸ್ಥತೆಯ ಕುರಿತು ಕಾರ್ಯಕ್ರಮ ನಡೆಸಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಲ್ಲಿ ಇರುತ್ತಾರೆ, ಈ ಕಾಯಿಲೆಯು ಎಲ್ಲರಿಗೂ ಬರಬಹುದು ಕಾಯಿಲೆಯು ಬಂದಂತ ವ್ಯಕ್ತಿಗಳ ನಡುವಳಿಕೆ ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನೇ ಅಳುವುದು, ನಗುವುದು, ಮಾತಾಡುವುದು, ಸಿಟ್ಟು ಮಾಡುವುದು. ಮಾನಸಿಕ ಕಾಯಿಲೆಗೆ ಒಳ್ಗಾಗಿದ್ದ ವ್ಯಕ್ತಿಗಳನ್ನು ಯಾವರೀತಿಯಾಗಿ ಪತ್ತೆ ಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 35 ಜನರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥತೆಯ ಮತ್ತು ಕ್ಯಾನ್ಸರ್ ಕುರಿತು ಅರಿವು”



ದಿನಾಂಕ 24 ಏಪ್ರಿಲ್ 2025ರಂದು ಕಾಮಲನಗರ ತಾಲೂಕಿನ ಬಳತ್ (ಕೆ) ಗ್ರಾಮಸ್ಥರನ್ನು ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರಿ ಸಂಗೀತಾ ರವರು ಮಾನಸಿಕ ಅಸ್ವಸ್ಥತೆಯ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ ಎಂದರೇನು? ಮಾನಸಿಕ ರೋಗಕ್ಕೆ ಬಲವಾದ ಕಾರಣಗಳು ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸಲಾಯಿತು. ಮಾನಸಿಕ ರೋಗಕ್ಕೆ ಚಿಕಿತ್ಸೆ ಇದೆ. ಮಾತ್ರೆಗಳು ಸತತವಾಗಿ ತೆಗೆದುಕೊಳ್ಳುವುದರ ಮೂಲಕ ರೋಗವು ಗುಣವಾಗುತ್ತದೆ. ಮಾನಸಿಕ ಕಾಯಿಲೆ ಹೊಂದಿದ ವ್ಯಕ್ತಿಗಳನ್ನು ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿರಬೇಕು ಎಂದು ಹೇಳಿದರು. ಅದರ ಜೊತೆಗೆ ಕ್ಯಾನ್ಸರ್ ಕಾಯಿಲೆಯು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ವಿಧಾನವನ್ನು ತಿಳಿಸಲಾಯಿತು. ಮದ್ಯಪಾನ ಧೂಮಪಾನದಿಂದಾಗಿ ಕ್ಯಾನ್ಸರ್ ಹುಟ್ಟುತ್ತದೆ. ನಾವು ಹಸಿ ತರಕಾರಿ ತಿನ್ನುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅಂದಾಗ ಮಾತ್ರ ನಮ್ಮ ಆರೋಗ್ಯವು ಚೆನ್ನಾಗಿರುತ್ತದೆ. ಮತ್ತು ಮಾನಸಿಕ ಅಸ್ವಸ್ಥರು ಯಾವುದೆ ಕೆಟ್ಟ ಚಟಗಳಿಗೆ ಒಳಗಾಗದೇ ಸರಿಯಾಗಿ ಚಿಕಿತ್ಸೆ ಪಡೆಯುವುದರಿಂದ ಹಂತ ಹಂತವಾಗಿ ಅವರ ಕಾಯಿಲೆಯೂ ಗುಣವಾಗುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 23 ಜನರು ಭಾಗವಹಿಸಿದರು.

## “ನರೇಗಾ ಕೆಲಸ ಕಾರ್ಮಿಕರಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿ”



ದಿನಾಂಕ 28 ಏಪ್ರಿಲ್ 2025ರಂದು ಬಸವಕಲ್ಯಾಣ ತಾಲೂಕಿನ ಗೋಕುಲ್ ಗ್ರಾಮದಲ್ಲಿ ನರೇಗಾ ಕೆಲಸ ಮಾಡುತ್ತಿರುವ ಜನರಿಗೆ ಮಾನಸಿಕ ಆರೋಗ್ಯ ಕುರಿತು ಜಾಗತಿಕ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತ ಆಶ್ರಮದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಸುಜಾತ ಅವರು ಮಾತನಾಡಿ, ನಮ್ಮ ಆರ್ಬಿಟ್ ಸಂಸ್ಥೆಯು 30 ವರ್ಷದಿಂದ ಸಮಾಜಸೇವೆ ಮಾಡುತ್ತಲೇ ಬಂದಿದೆ ಎಂದು ಜನರಿಗೆ ತಿಳಿಸುತ್ತಾ ನಮ್ಮ ಆರ್ಬಿಟ್ ಸಂಸ್ಥೆಯು ಹಗಲಿರುಳು ಎನ್ನದೆ ಜನರಿಗಾಗಿ ಜನರಿಗೋಸ್ಕರ ಸೇವೆ ಮಾಡುತ್ತಲೇ ಬಂದಿದೆ. ಮಾನಸಿಕ ಕಾಯಿಲೆ ಎಂದರೇನು ಮಾನಸಿಕ ಕಾಯಿಲೆಯ ಲಕ್ಷಣಗಳು, ಹೀಗೆ ಅನೇಕ ರೀತಿಯ ಗುಣಲಕ್ಷಣಗಳನ್ನು ತಿಳಿಸಿದರು. ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯನ್ನು ಉಚಿತ ಚಿಕಿತ್ಸೆಯ ಮೂಲಕ ಅವರನ್ನು ಗುಣಪಡಿಸಿ ನಮ್ಮ ನಿಮ್ಮ ಹಾಗೆ ಅವರು ಕೂಡ ಸಮಾಜದಲ್ಲಿ ಸಂತೋಷವಾಗಿ ಜೀವನವನ್ನು ನಡೆಸಬೇಕೆಂಬುದೇ ನಮ್ಮ ಸಂಸ್ಥೆಯ ಉದ್ದೇಶವಾಗಿದೆ. ಸತತವಾಗಿ ಮಾತ್ರೆಗಳನ್ನು ಸೇವಿಸಿದ್ದ ಪರಿಣಾಮದಿಂದ ಅನೇಕ ವ್ಯಕ್ತಿಗಳು ಗುಣಮುಖರಾಗಿ ತಮ್ಮ ಹಿಂದಿನ ಜೀವನಕ್ಕೆ ಹಿಂತಿರುಗುವ ಯಶಸ್ವಿನ ಕಥೆಗಳು ಹೊಂದಿದ್ದೇವೆ. ಇಂಥವರಿಗೆ ಜೀವನೋಪಾಯಕ್ಕಾಗಿ ಉದ್ಯೋಗಿಕ ತರಬೇತಿಗಳು ಸಹ ನೀಡಲಾಗುತ್ತದೆ. ನಿಮ್ಮ ಸುತ್ತಮುತ್ತ ಯಾರಾದರೂ ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ ನಮ್ಮ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ 9036664271 ಕರೆ ಮಾಡಿ ಸಹಾಯ ಪಡೆಯಬೇಕು. ಆರೋಗ್ಯ ಇಲಾಖೆಯ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ 14416ಕೆ ಕರೆಮಾಡಿ ಉಚಿತ ಆಪ್ತಸಮಾಲೋಚನೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 55 ಜನ ಭಾಗವಹಿಸಿದ್ದರು ಇದರ ಸದುಪಯೋಗ ಪಡೆದುಕೊಂಡರು.

## “ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಜೀವನೋಪಾಯಕ್ಕಾಗಿ ಔದ್ಯೋಗಿಕ ತರಬೇತಿಗಳು”



24 ಏಪ್ರಿಲ್ 2025ರಂದು ಬಸವಕಲ್ಯಾಣ ತಾಲೂಕಿನ ನಿರುಗುಡಿ ಗ್ರಾಮದ ಭೀಮ್‌ನಗರ್ ಬಡಾವಣೆಯ ನಿವಾಸಿಗಳಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತ ಆಶ್ರಯದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡ ಜನರಿಗೋಸ್ಕರ ಹಗಲಿರುಳು ದುಡಿಯುತ್ತಿದೆ. ಇತ್ತೀಚಿಗೆ ಎರಡು ವರ್ಷಗಳಿಂದ ಮಾನಸಿಕ ಅಸ್ವಸ್ಥರ ಮಧ್ಯದಲ್ಲಿ ಸೇವೆ ಸಲ್ಲಿಸುತ್ತಿದೆ. ಪ್ರಾಥಮಿಕವಾಗಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯ ವ್ಯವಸ್ಥೆಯೂ ಕಲ್ಪಿಸಲಾಗುತ್ತದೆ. ಸತತವಾಗಿ ಮಾತ್ರೆಗಳನ್ನು ಸೇವಿಸಿದ ಪರಿಣಾಮದಿಂದ ಅನೇಕ ವ್ಯಕ್ತಿಗಳು ಗುಣಮುಖರಾಗಿ ತಮ್ಮ ಹಿಂದಿನ ಜೀವನಕ್ಕೆ ತಿರುಗಿರುವ ಯಶಸ್ವಿನ ಕಥೆಗಳು ಹೊಂದಿದ್ದೇವೆ. ಇಂಥವರಿಗೆ ಜೀವನೋಪಾಯಕ್ಕಾಗಿ ಔದ್ಯೋಗಿಕ ತರಬೇತಿಗಳು ಸಹ ನೀಡಲಾಗುತ್ತಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 16 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮ”



ದಿನಾಂಕ 23 ಏಪ್ರಿಲ್ 2025ರಂದು ಬಸವಕಲ್ಯಾಣ ತಾಲೂಕಿನ ಹುಲ್ಗುತ್ತಿ ಗ್ರಾಮದ ಸಾರ್ವಜನಿಕರಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿಕ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಲಿವ್.ಲವ್.ಲಾಫ್ ಇವರ ಸಂಯುಕ್ತ ಆಶ್ರಮದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಸುಜಾತ ಅವರು ಮಾತನಾಡಿ, ನಮ್ಮ ಆರ್ಬಿಟ್ ಸಂಸ್ಥೆಯು 30 ವರ್ಷದಿಂದ ಸಮಾಜ ಸೇವೆ ಮಾಡುತ್ತಲೇ ಬಂದಿದೆ. ಮಾನಸಿಕ ರೋಗ ಎಂದರೇನು? ಮಾನಸಿಕ ರೋಗವು ಹೇಗೆ ಹುಟ್ಟುತ್ತದೆ, ಅದರ ಲಕ್ಷಣಗಳನ್ನು ಹೆಗೆ ಇರುತ್ತವೆ ಎಂದು ತಿಳಿಸಿದರು. ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯನ್ನು ಉಚಿತ ಚಿಕಿತ್ಸೆಯ ಮೂಲಕ ಅವರನ್ನು ಗುಣಪಡಿಸಿ ನಮ್ಮ ನಿಮ್ಮ ಹಾಗೆ ಅವರು ಕೂಡ ಸಮಾಜದಲ್ಲಿ ಸಂತೋಷವಾಗಿ ಜೀವನವನ್ನು ನಡೆಸಬೇಕೆಂಬುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಮತ್ತು ಬಡ ಜನರಿಗೋಸ್ಕರ ನಮ್ಮ ಸಂಸ್ಥೆಯು ಸಮಾಜ ಸೇವೆಯನ್ನು ಮಾಡುತ್ತಲೇ ಬಂದಿದೆ. ಮಾನಸಿಕ ಕಾಯಿಲೆಗೆ ಒಳಗಾದಂತ ಎಷ್ಟೋ ಕುಟುಂಬಗಳು ಈಗ ನಮ್ಮ ಸಂಸ್ಥೆಯಿಂದ ಹೊಸ ಜೀವನವನ್ನು ನಡೆಸುತ್ತಿದ್ದಾರೆ. ಪ್ರಾಥಮಿಕ ಹಂತದಲ್ಲಿ ಪತ್ತೆಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ವ್ಯವಸ್ಥೆಯು ಕಲ್ಪಿಸಲಾಗುತ್ತದೆ. ಸತತವಾಗಿ ಮಾತ್ರೆಗಳನ್ನು ಸೇವಿಸುವುದರ ಮೂಲಕ ಅವರ ಕಾಯಿಲೆಯು ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಬರುತ್ತದೆ. ಇಂತವರಿಗೆ ಜೀವನದ ಉಪಯೋಗಕ್ಕಾಗಿ ಉದ್ಯೋಗದ ತರಬೇತಿ ಆಗಿರಬಹುದು, ಧನ ಸಹಾಯ ವಾಗಿರಬಹುದು, ಕುರಿಗಳ ಸಹಾಯ ವಾಗಿರಬಹುದು ಹೀಗೆ ಅವರಿಗೆ ಉಚಿತ ಚಿಕಿತ್ಸೆ ಕೊಡುವುದರ ಮೂಲಕ ನಮ್ಮ ಸಂಸ್ಥೆಯು ಮುಂದಾಗಿದೆ ಎಂದು ತಿಳಿಸಿದರು. ಈ ಜಾಗೃತಿಕ ಕಾರ್ಯಕ್ರಮದಲ್ಲಿ ಒಟ್ಟು 12 ಜನ ಭಾಗವಹಿಸಿದ್ದರು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ, ಡಿ.ಎಮ್.ಎಚ್.ಪಿ ಶಿಬಿರದಲ್ಲಿ ಉಚಿತ ತಪಾಸಣೆ”




ದಿನಾಂಕ 23 ಏಪ್ರಿಲ್ 2025ರಂದು ಕಮಲನಗರ್ ತಾಲೂಕಿನ ಲಕ್ಷ್ಮೀನಗರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಗ್ರಾಮಸ್ಥರಿಗೆ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ನೀಡಲಾಯಿತು. ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆ ಒಂದು ಮನಸ್ಸಿನ, ಮೆದುಳಿನ ಕಾಯಿಲೆಯಾಗಿದೆ. ಮೂಢನಂಬಿಕೆಗೆ ಬಲಿಯಾಗದೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರನ್ನು ಗೌರವ, ಸ್ಥಾನ-ಮಾನದೊಂದಿಗೆ ಕಾಣಬೇಕು. ನಿದ್ರಾಹೀನತೆ, ಭಯ, ಆತಂಕ, ಖಿನ್ನತೆ, ತನ್ನಲ್ಲೇ ತಾನು ಮಾತನಾಡುವುದು, ವಿನಾಕಾರಣ ನಗುವುದು, ಸಿಟ್ಟು, ಸತತ ದುಃಖ, ನಿರಾಸೆ, ಮತ್ತು ಆತ್ಮಹತ್ಯೆಯಂತಹ ಲಕ್ಷಣಗಳು ಕಂಡು ಬಂದಲ್ಲಿ, ಹತ್ತಿರದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಜನವಾಡ್ದಲ್ಲಿ ಪ್ರತಿ ತಿಂಗಳ ಮೊದಲನೇ ಸೋಮವಾರ ನಡೆಯುವ ಡಿ.ಎಮ್.ಎಚ್.ಪಿ ಶಿಬಿರದಲ್ಲಿ ಮನೋವೈದ್ಯರು ಉಚಿತ ತಪಾಸಣೆ, ಆಪ್ತ ಸಮಾಲೋಚನೆ ಮತ್ತು ಮಾತ್ರೆಗಳನ್ನು ನೀಡುತ್ತಾರೆ ಇದರ ಸದುಪಯೋಗ ಎಲ್ಲರೂ ಪಡೆದುಕೊಳ್ಳಬೇಕು. ಆರ್ಬಿಟ್ ಸಂಸ್ಥೆಯ ಮಾನಸಿಕ ಅಸ್ವಸ್ಥರ ಸಹಾಯವಾಣಿ ಸಂಖ್ಯೆ 90366 64271 ಗೆ ಕರೆ ನೀಡಿ ಸಹಾಯ ಪಡೆಯಬೇಕು. ಆರೋಗ್ಯ ಇಲಾಖೆಯ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ 14416ಕೆ ಕರೆಮಾಡಿ ಉಚಿತ ಆಪ್ತಸಮಾಲೋಚನೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 10 ಜನ ಭಾಗವಹಿಸಿದ್ದರು.

## “ಮೂಢನಂಬಿಕೆಗೆ ಬಲಿಯಾಗದೆ ಮನೋವೈದ್ಯರ ತಪಾಸಣೆ, ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ”



ದಿನಾಂಕ 15 ಏಪ್ರಿಲ್ 2025ರಂದು ಬೀದರ್ ತಾಲೂಕಿನ ಬೊಂಪಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಗ್ರಾಮಸ್ಥರಿಗೆ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ನೀಡಲಾಯಿತು. ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆ ಒಂದು ಮನಸ್ಸಿನ, ಮೆದುಳಿನ ಕಾಯಿಲೆಯಾಗಿದೆ. ಮೂಢ ನಂಬಿಕೆಗೆ ಬಲಿಯಾಗದೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರನ್ನು ಗೌರವ, ಸ್ಥಾನ–ಮಾನದೊಂದಿಗೆ ಕಾಣಬೇಕು. ನಿದ್ರಾಹಿನತೆ, ಭಯ, ಆತಂಕ, ಖಿನ್ನತೆ, ತನ್ನಲ್ಲೇ ತಾನು ಮಾತನಾಡುವುದು, ವಿನಾಕಾರಣ ನಗುವುದು, ಸಿಟ್ಟು, ಸತತ ದುಃಖ, ನಿರಾಸೆ, ಮತ್ತು ಆತ್ಮಹತ್ಯೆಯಂತಹ ಲಕ್ಷಣಗಳು ಕಂಡುಬಂದಲ್ಲಿ, ಹತ್ತಿರದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಜನವಾಡದಲ್ಲಿ ಪ್ರತಿ ತಿಂಗಳ ಮೊದಲನೇ ಸೋಮವಾರ ನಡೆಯುವ ಡಿ.ಎಮ್.ಎಚ್.ಪಿ ಶಿಬಿರದಲ್ಲಿ ಮನೋವೈದ್ಯರು ಉಚಿತ ತಪಾಸಣೆ, ಆಪ್ತ ಸಮಾಲೋಚನೆ ಮಾಡಿ ಮಾತ್ರೆಗಳನ್ನು ನೀಡುತ್ತಾರೆ. ಇದರ ಸದುಪಯೋಗ ಎಲ್ಲರೂ ಪಡೆದುಕೊಳ್ಳಬೇಕು ಎಂದು ಹೇಳಿದರು. ಆರ್ಬಿಟ್ ಸಂಸ್ಥೆಯ ಮಾನಸಿಕ ಅಸ್ವಸ್ಥರ ಸಹಾಯವಾಣಿ ಸಂಖ್ಯೆ 9036664271 ಗೆ ಕರೆ ನೀಡಿ ಸಹಾಯ ಪಡೆಯಬೇಕು. ಆರೋಗ್ಯ ಇಲಾಖೆಯ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ 14416ಕೆ ಕರೆಮಾಡಿ ಉಚಿತ ಆಪ್ತಸಮಾಲೋಚನೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 10 ಜನ ಭಾಗವಹಿಸಿದ್ದರು.

## “ಸಾರ್ವಜನಿಕರಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿಗೆ ಕಾರ್ಯಕ್ರಮ”



ದಿನಾಂಕ 11 ಏಪ್ರಿಲ್ 2025ರಂದು ಬಸವಕಲ್ಯಾಣ ತಾಲೂಕಿನ ಕಿಟ್ಟ ಗ್ರಾಮದ ಸಾರ್ವಜನಿಕರಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿಗೆ ಕಾರ್ಯಕ್ರಮವನ್ನು ಮಾಡಲಾಯಿತು. ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತ ಆಶ್ರಮದಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಸುಜಾತ ಅವರು ಮಾತನಾಡಿ, ನಮ್ಮ ಆರ್ಬಿಟ್ ಸಂಸ್ಥೆಯು 30 ವರ್ಷದಿಂದ ಸಮಾಜ ಸೇವೆ ಮಾಡುತ ಬಂದಿದೆ. ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯನ್ನು ಉಚಿತ ಚಿಕಿತ್ಸೆಯ ಮೂಲಕ ಅವರನ್ನು ಗುಣಪಡಿಸಿ, ನಮ್ಮ ನಿಮ್ಮ ಹಾಗೆ ಅವರು ಕೂಡ ಸಮಾಜದಲ್ಲಿ ಸಂತೋಷವಾಗಿ ಜೀವನವನ್ನು ನಡಿಸಬೇಕೆಂಬುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಮತ್ತು ಬಡ ಜನರಿಗೋಸ್ಕರ ನಮ್ಮ ಸಂಸ್ಥೆಯ ಬಾಗಿಲು ತೆರೆದಿರುತ್ತಾರೆ. ಬೀದಿಗೆ ಬಂದಿರುವ ಎಷ್ಟೋ ಬಡ ಕುಟುಂಬಗಳು ನಮ್ಮ ಸಂಸ್ಥೆಯಿಂದ ಮತ್ತೆ ಹೊಸ ಜೀವನವನ್ನು ಕಟ್ಟಿಕೊಂಡು ಸಂತೋಷವಾಗಿದ್ದಾರೆ. ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯ ವ್ಯವಸ್ಥೆಯು ಕಲ್ಪಿಸಲಾಗುತ್ತದೆ. ಸತತವಾಗಿ ಮಾತ್ರೆಗಳನ್ನು ಸೇವಿಸುವುದರ ಮೂಲಕ ಅವರ ಕಾಯಿಲೆಯೂ ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಬರುತ್ತದೆ. ಹೀಗೆ ಅನೇಕ ವ್ಯಕ್ತಿಗಳನ್ನು ನಾವು ಗುಣಮುಖರಾಗಿ ತಮ್ಮ ಹಿಂದಿನ ಜೀವನಕ್ಕೆ ಹಿಂತಿರುಗುವ ಯಶಸ್ವಿನ ಕಥೆಗಳು ಹೊಂದಿದ್ದೇವೆ. ಇಂಥವರಿಗೆ ಜೀವನೋಪಾಯಕಾಗಿ ಉದ್ಯೋಗಿಕ ತರಬೇತಿಗಳು ಸಹ ನೀಡಲಾಗುತ್ತದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 12 ಜನರು ಭಾಗವಹಿಸಿದ್ದರು

## “ಮಾನಸಿಕ ಕಾಯಿಲೆ ಹೊಗಲಾಡಿಸಿ, ವೈದ್ಯರ ಸೂಕ್ತ ಸಲಹೆಯೊಂದಿಗೆ ತಪಾಸಣೆಗೆ ವಳಪಡಿಸಿ”



ದಿನಾಂಕ 9 ಏಪ್ರಿಲ್ 2025ರಂದು ರೈಪಲ್ಲಿ ಗ್ರಾಮದಲ್ಲಿ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಅಮರ ರವರು ಮಾನಸಿಕ ಅಸ್ವಸ್ಥತೆ ಕುರಿತು ಕಾರ್ಯಕ್ರಮ ನಡೆಸಿದರು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಮಾನಸಿಕ ಕಾಯಿಲೆಗೆ ಒಳ್ಗಾಗಿದ್ದ ವ್ಯಕ್ತಿಗಳನ್ನೂ ಯಾವ ರೀತಿಯಲ್ಲಿ ಇರುತ್ತಾರೆ, ಅವರನ್ನು ಹೇಗೆ ಪತ್ತೆಹಚಬೇಕು ಎಂಬುದನ್ನು ತಿಳಿಸಲಾಯಿತು. ಈ ಕಾಯಿಲೆಯು ಎಲ್ಲರಿಗೂ ಬರಬಹುದು ಕಾಯಿಲೆಯು ಬಂದಂತಹ ವ್ಯಕ್ತಿಗಳ ನಡುವಳಿಕೆ ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನೇ ಆಳುವುದು, ನಗುವುದು, ಸಿಟ್ಟು ಮಾಡುವುದು ಇಂತಹ ಲಕ್ಷಣಗಳು ಕಂಡು ಬರುತ್ತವೆ. ನಿಮ್ಮ ಗ್ರಾಮಗಳಲ್ಲಿ ಇಂತಹ ವ್ಯಕ್ತಿಗಳನ್ನು ಕಂಡು ಬಂದರೆ ವೈದ್ಯರನ್ನು ಸಂಪರ್ಕಿಸಬೇಕು. ವೈದ್ಯರ ಸೂಕ್ತ ಸಲಹೆಯೊಂದಿಗೆ ತಪಾಸಣೆಗೆ ಓಳಪಡಿಸಿ ಮಾತ್ರಗಳನ್ನು ಉಚಿತವಾಗಿ ಪಡೆದುಕೊಂಡು ಸೇವಿಸುವುದರಿಂದ ಮಾನಸಿಕ ಕಾಯಿಲೆ ಹೊಗಲಾಡಿಸಿ ಸಮಾಜದಲ್ಲಿ ಒಳ್ಳೆ ಜೀವನ ನಡೆಸಬೇಕೆಂಬುದೇ ನಮ್ಮ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನರು ಭಾಗವಹಿಸಿದರು.

## “ಮಾನಸಿಕ ಕಾಯಿಲೆ ಮೆದುಳಿನ ಕಾಯಿಲೆ! ಮೂಢನಂಬಿಕೆಗೆ ಬಲಿಯಾಗದಿರಿ!”



ದಿನಾಂಕ 07 ಏಪ್ರಿಲ್ 2025ರಂದು ಬೀದರ ತಾಲೂಕಿನ ಘೋಡಂಪಲಿ ಗ್ರಾಮದಲ್ಲಿ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಅರುಣ ರವರು ಮಾನಸಿಕ ಅಸ್ವಸ್ಥತೆಯ ಅರಿವು ಮೂಡಿಸಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು. ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಇದು ಒಂದು ಮೆದುಳಿನ ಕಾಯಿಲೆಯಾಗಿದ್ದು, ಈ ಕಾಯಿಲೆಯು ಎಲ್ಲರಿಗೂ ಬರಬಹುದು ಈ ಕಾಯಿಲೆಯು ಬಂದಂತ ವ್ಯಕ್ತಿಗಳ ನಡುವಳಿಕೆ ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನು ಮಾಡುವುದು ನಿದ್ದೆ ಮಾಡುವುದು, ವಿನಾಕಾರಣ ನಗುವುದು, ವಿನಾಕಾರಣ ಆಳುವುದು, ವಿನಾಕಾರಣ ಸಿಟ್ಟು ಮಾಡುವದು. ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿಯಾಗಿ ಪತ್ತೆಹಚ್ಚಬೇಕು ಎಂಬುದಾಗಿ ತಿಳಿಸಲಾಯಿತು. ಇಂತಹ ವ್ಯಕ್ತಿಗಳನ್ನು ನಿಮ್ಮಲ್ಲಿ ಕಂಡು ಬಂದರೆ ಅವರನ್ನು ಮತ್ತೆ ಸಮಾಜದಲ್ಲಿ ಬದುಕು ಕಟ್ಟಿಕೊಳ್ಳುವಂತೆ ನಮ್ಮವರು ಸಮಾಜ ಸೇವೆ ಮಾಡುತ್ತಿದ್ದಾರೆ. ಅವರು ಕೂಡ ಸಮಾಜದಲ್ಲಿ ಒಳ್ಳೆ ಜೀವನ ನಡೆಸಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ. ಹೀಗೆ ಮಾನಸಿಕ ಕಾಯಿಲೆ ಹೊಂದಿರುವ ವ್ಯಕ್ತಿಯನ್ನು ಮೂಢನಂಬಿಕೆಗೆ ಬಲಿಯಾಗದೆ ಅವರಿಗೆ ಸರಿಯಾಗಿ ಚಿಕಿತ್ಸೆ ಕೊಡುವದರ ಮೂಲಕ ದಿನನಿತ್ಯ ಮಾತ್ರಗಳು ಸೇವನೆ ಮಾಡುವುದರ ಮುಲಕ ಅವರು ಸ್ವಲ್ಪಸ್ವಲ್ಪವಾಗಿ ಬದಲಾವಣೆಯನ್ನು ಹೊಂದುತ್ತಾರೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 8 ಜನರು ಭಾಗವಹಿಸಿದರು.

# ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಸಂವಿಧಾನಿಕ ಹಕ್ಕುಗಳ ಬಗ್ಗೆ ತರಬೇತಿ” ಮತ್ತು ಕ್ಯಾನ್ಸರ್ ಕುರಿತು ಜಾಗೃತಿ”



ದಿನಾಂಕ 11 2025ರಂದು ಸಿಸ್ಟರ್ ಕ್ರಿಸ್ಟಿನ್ ರವರು ಬಸವಕಲ್ಯಾಣ ತಾಲೂಕಿನ ಲಿಂಬಾಪುರ್ ಗ್ರಾಮದಲ್ಲಿ ಮೂರು ಸ್ವ-ಸಹಾಯ ಸಂಘಗಳ ಸದಸ್ಯರಿಗೆ ಸಂವಿಧಾನಿಕ ಹಕ್ಕುಗಳ ಬಗ್ಗೆ ತರಬೇತಿ ನೀಡಿದರು. ಈ ತರಬೇತಿಯಲ್ಲಿ ಹೆಣ್ಣುಮಕ್ಕಳ ಹಕ್ಕುಗಳ ಬಗ್ಗೆ ಸ್ಪಷ್ಟವಾಗಿ ತಿಳಿಸಿದರು. ಸಂವಿಧಾನವು ಹೆಣ್ಣು ಮಕ್ಕಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಸಮಾನ ಹಕ್ಕನ್ನು ನೀಡಿದೆ. ತಾವೆಲ್ಲರೂ ತಮ್ಮ ಹಕ್ಕುಗಳನ್ನು ಉಲ್ಲಂಘನೆ ಆದಲ್ಲಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಡಬೇಕೆಂದು ತಿಳಿಸಿದರು. ಭಾರತದ ಸಂವಿಧಾನದ ಪ್ರಸ್ತಾವನೆ ಮಂಡಿಸಿ. ಹಕ್ಕುಗಳ ಮಹತ್ವವನ್ನು ವಿವರಿಸಿದರು. ಹಾಗೂ ಇತ್ತಿನಲ್ಲಿ ಅತಿ ಹೆಚ್ಚಾಗಿ ಹರಡುತ್ತಿರುವ ಕ್ಯಾನ್ಸರ್ ರೋಗವನ್ನು ನಮ್ಮ ನಾಡಿನಲ್ಲಿ ಕಂಡುಬರುತ್ತದೆ. ಆದುದರಿಂದ ದುಷ್ಟಟಗಳಿಗೆ ಗುರಿಯಾಗದೆ ಆರೋಗ್ಯವಂತರಾಗಿ ಉತ್ತಮ ಜೀವನ ನಡಿಸಿರಿ ಎಂದು ಹೇಳಿದರು. ಪ್ರಾಮುಖ್ಯವಾಗಿ ಹೆಣ್ಣುಮಕ್ಕಳಲ್ಲಿ ಎದೆಯ ಭಾಗದಲ್ಲಿ ಗಡ್ಡೆಗಳು ಕಂಡು ಬಂದರೆ ವೈದ್ಯರ ಸಲಹೆ ಪಡೆದು ಚಿಕಿತ್ಸೆ ಪಡೆದುಕೊಳ್ಳಿ ಎಂದು ತಿಳಿಸಿದರು.

## “ನೋದ ಜೀವಕದಕೆ ನಡೆದಾದಲು ಗಾಲಿ ಕುರ್ಚಿ ಸಹಾಯ”



ಹೆಸರು ಮಂಗಲಾ ತಂದೆ ನರಸಿಂಗ್ ರಾವ್ ಗ್ರಾಮ ಶಮಶರಪುರವಾಡಿ ನಿವಾಸಿಯಾಗಿದ್ದು ತಂದೆ ತೀರಿಕೊಂಡಿದ್ದಾರೆ ಸ್ವಂತ ಮನೆ ಇದೆ ಬಿ.ಪಿ.ಎಲ್ ರೇಷನ್ ಕಾರ್ಡ್ ಹೊಂದಿದವರಾಗಿದ್ದಾರೆ ಮಂಗಲಾ ಮತ್ತು ಅವರ ತಾಯಿ ಇಬ್ಬರು ಮನೆಯಲ್ಲಿ ವಾಸಮಾಡುತ್ತಾರೆ. ಮಂಗಲರವರು ಹುಟ್ಟಿನಿಂದಲೇ ಅಂಗವಿಕಲರಾಗಿದ್ದಳು ಅವಳಿಗೆ ಓಡಾಡಿಲಿಕ್ಕೆ ತುಂಬಾ ಕಷ್ಟವಾಗುತ್ತದೆ ಇವರು ತುಂಬಾ ಕಡು ಬಡವರು ಇದ್ದಕಾರಣ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ಸುಜಾತ ರವರು  ಶಮಶರಪುರವಾಡಿ ಎಲ್ಲಿ ಕಾರ್ಯನಿರ್ವಹಿಸುವುದರ ಜೊತೆಗೆ ಮಂಗಲ ರವರನ್ನು ಅಂಗವಿಕಲತ್ತೆ ಇರುವುದನ್ನು ಗುರುತಿಸಿ ಅವರಿಗೆ ಆರ್ಬಿಟ್ ಸಂಸ್ಥೆಯಿಂದ ಸಹಾಯವಾಗುವುದರ ಕುರಿತು ತಿಳಿಸಿ ಅವರಿಗೆ ಆರ್ಬಿಟ್ ಸಂಸ್ಥೆಯ ನಿರ್ದೇಶಕರು ಫಾದರ್ ವಿಕ್ಟರ್ ವಾಸ್ ರವರು  ನಡೆದಾಡಲು ತುಂಬಾ ಕಷ್ಟವಾಗುತ್ತಿರುವ ಕಾರಣ ಅವರಿಗೆ ವಿಲ್ ಚೇರ ಒದಗಿಸಿ ನಡೆದಾಡಲು ಸಹಾಯವನ್ನು ಮಾಡಿದ್ದಾರೆ. ಹೀಗೆ ಅನೇಕ ಅಂಗವಿಕಲರಿಗೆ ವಿಲ್ ಚೇರ್ ಒದಗಿಸಿ ಓಡಾಡುವುದಕೆ  ತುಂಬಾ ಸಹಾಯವನ್ನು ಮಾಡಿದ್ದಾರೆ. ನನಗೆ ಓಡಾಡುವುದು ತುಂಬಾ ಕಷ್ಟವಾಗುತ್ತಿತ್ತು ನನಗೆ ಆರ್ಬಿಟ್ ಸಂಸ್ಥೆಯ ನಿರ್ದೇಶಕರು ವಿಲ್ ಚೇರ ಒದಗಿಸಿ ತುಂಬಾ ಸಹಾಯ ಮಾಡಿದ್ದಾರೆ. ನನ್ನ ಪರವಾಗಿ ನನ್ನ ಕುಟುಂಬದ ಪರವಾಗಿ ಆರ್ಬಿಟ್ ಸಂಸ್ಥೆಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಮ ಅನಿಸಿಕೆಯನು ವ್ಯಕ್ತಪಡಿಸದ್ದರು.

## “ಲಿಂಗ ಸಮಾನತೆಯ ಕುರಿತು ತರಬೇತಿ”



07 ಏಪ್ರಿಲ್ 2025ರಂದು ಚಿಟಗುಪ್ಪ ತಾಲೂಕಿನ ಬೆಳಕೇರ ಗ್ರಾಮದಲ್ಲಿ ಮಲ್ಲಿಗೆ ಮಹಾಸಂಗದ ಸದಸ್ಯರಿಗೆ ಶ್ರೀಮತಿ ರೀಟಾ ರವರ ಲಿಂಗ ಸಮಾನತೆಯ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಲಿಂಗ ಸಮಾನತೆ ಎಂದರೆ ಗಂಡು ಮತ್ತು ಹೆಣ್ಣು ಮಕ್ಕಳನ್ನು ಸಮಾನವಾಗಿ ನೋಡಿಕೊಳ್ಳುವುದು. ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಇಬ್ಬರಿಗೂ ಉನ್ನತ ಶಿಕ್ಷಣವನ್ನು ಕಳುಹಿಸಿ ಅವರ ಭವಿಷ್ಯವನ್ನು ರೂಪಿಸಬೇಕೆಂದು ತಿಳಿಸಿದರು. ಹಾಗೆ ಬಾಲ್ಯ ವಿವಾಹದಿಂದ ಆಗುವ ದುಷ್ಪರಿಣಾಮದ ಕುರಿತು ಮನವರಿಕೆ ಮಾಡಿಸಿದರು. ಈ ತರಬೇತಿಯಲ್ಲಿ 18 ಜನರ ಭಾಗವಹಿಸಿ ಲಿಂಗ ಸಮಾನತೆಯ ಕುರಿತು ತಿಳಿದುಕೊಂಡರು.

## “ಲಿಂಗ ಸಮಾನತೆಯ ಬಾಹ್ಯ ತಂಡವನ್ನು ರಚನೆ”



ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆ ಸಭಾಂಗಣದಲ್ಲಿ ದಿನಾಂಕ 22.4.2025ರಂದು ಮಹಿಳಾ ಸಬಲೀಕರಣ ಯೋಜನೆಯಡಿಯಲ್ಲಿ ಬರುವ ಲಿಂಗ ಸಮಾನತೆಯ ಬಾಹ್ಯ ತಂಡವನ್ನು ರಚನೆ ಮಾಡಲಾಯಿತು. ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲ ರವರು ಬಾಹ್ಯ ತಂಡದ ಗುರಿ ಉದ್ದೇಶದ ಕುರಿತು ವಿವರಣೆಯನ್ನು ನೀಡುತ್ತಾ ಲಿಂಗ ಸಮಾನತೆಯನ್ನು ಕಾಣಬೇಕು ಹೆಣ್ಣು ಗಂಡು ಎಂಬ ಭೇದ ಭಾವ ಯಾರಲ್ಲಿಯೂ ಇರಬಾರದು ಹಾಗೂ ಈ ತಂಡದಲ್ಲಿ ಇತರ ಸಂಘ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವ ಫಲಾನುಭವಿಗಳು ಇತರ ಸಂಘಟನೆಯ ಪದಾಧಿಕಾರಿಗಳು ಪೊಲೀಸ್ ಇಲಾಖೆ ವಕೀಲರು ಸ್ವಯಂಸೇವಕರಾಗಿ ಸಮಾಜದಲ್ಲಿ ಕೆಲಸ ನಿರ್ವಹಿಸುವವರು ಒಳಗೊಂಡಿರುತ್ತಾರೆ. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ್ ರವರು ಸಮಾಜ ಸುಧಾರಣೆ ಒಬ್ಬಿಬ್ಬರಿಂದ ಸಾಧ್ಯವಿಲ್ಲ ಸಂಸ್ಥೆಯ ಜೊತೆಗೆ ನಿಮ್ಮೆಲ್ಲರ ಸಹಕಾರ ಮಹತ್ವವಾದದ್ದು ಆದ್ದರಿಂದ ಸಮಾಜದಲ್ಲಿ ನಡೆಯುವಂತಹ ಲಿಂಗ ತಾರತಮ್ಯ ಜಾತಿಭೇದ ಎನ್ನುವಂತದ್ದು ನಾವೆಲ್ಲರೂ ಒಟ್ಟಾಗಿ ಸೇರಿ ಸಮನತೆ ಕಾಣುವಲ್ಲಿ ಪ್ರಯತ್ನಿಸಬೇಕು. ದೇವರ ದೃಷ್ಟಿಯಲ್ಲಿ ಹೆಣ್ಣು ಗಂಡು ಇಬ್ಬರು ಸಮಾನರು ಯಾರು ಮೇಲು ಕೀಳಲ್ಲ ಇದನ್ನು ಮನುಷ್ಯರಾದ ನಾವು ಮಾಡಿಕೊಂಡ ರೂಢಿಯಾಗಿದೆ. ಅದರಿಂದ ಪ್ರತಿಯೊಬ್ಬರ ಕುಟುಂಬದಲ್ಲಿಯೂ ಮನದಲ್ಲಿಯೂ ಸಮಾನತೆ ಎಂಬ ಭಾವನೆಯನ್ನು ಕಾಣಬೇಕೆಂದು ತಮ್ಮ ನುಡಿಯನ್ನು ನುಡಿದರು. 15 ಫಲಾನುಭವಿಗಳು ಭಾಗವಹಿಸಿದರು.





## “ಲಿಂಗ ಸಮಾನತೆ ಕುರಿತು ತರಬೇತಿ”ಹಂಡು ಹೆಣ್ಣು ಭೇಧ ಬೇಡ”




ಏಪ್ರಿಲ್ 5 2025ರಂದು ಚಟ್ಟಗುಪ್ಪ ತಾಲೂಕಿನ ಗ್ರಾಮದಲ್ಲಿ ಸಂಘ ಮತ್ತು ಮಹಾಸಂಗದ ಸದಸ್ಯರಿಗೆ ಶ್ರೀಮತಿ ಅಮಿತಾ ಲಿಂಗ ಸಮಾನತೆ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಶ್ರೀಮತಿ ಮಹಾನಂದ ಮತ್ತು ಶ್ರೀ ಅರುಣ್ ಕುಮಾರ್ ಲಿಂಗ ಸೂಕ್ಷ್ತೆ ಪ್ರೇರಣಾ ತಂಡದ ಸದಸ್ಯರು ಸಂಪನ್ಮೂಲ ವ್ಯಕ್ತಿಯಾಗಿ ಲಿಂಗ ಮತ್ತು ಲಿಂಗತ್ವ ವ್ಯತ್ಯಾಸದ ಕುರಿತು ಸದಸ್ಯರಿಗೆ ತಿಳಿಸುತ್ತಾ ಲಿಂಗ ಎಂದರೆ ಇದು ಪ್ರಕೃತಿದತ್ತವಾಗಿ ಬಂದಿರುವಂತದು ಬದಲಾಯಿಸಲಾಗುವುದಿಲ್ಲ. ಲಿಂಗತ್ವ ಎಂದರೆ ಇದು ಯಾವ ಸಮಯದಲ್ಲೂ ಬದಲಾಯಿಸಬಹುದು. ಇದು ಸಮಾಜ ನಮ್ಮ ಮೇಲೆ ಹೇರಲ್ಪಟ್ಟ ಜವಾಬ್ದಾರಿ ಮತ್ತು ಪಾತ್ರಗಳು ಎಂದು ತಿಳಿಸುತ್ತಾ. ಲಿಂಗ ಸಮಾನತೆ ಬರಬೇಕಾದರೆ ಮೊದಲು ನಾವು ನಮ್ಮ ಕುಟುಂಬದಿಂದಲೇ ಪ್ರಾರಂಭಿಸಬೇಕು. ಗಂಡು ಮತ್ತು ಹೆಣ್ಣು ಮಕ್ಕಳನ್ನು ಮನೆ ಕೆಲಸದಲ್ಲಿ ಶಿಕ್ಷಣದಲ್ಲ ಉಡುಗೆ ತೊಡುಗೆ ಹಾಗೂ ಊಟದಲ್ಲಿ ಸಮಾನತೆಯಿಂದ ಕಾಣಬೇಕು. ಇದು ನಮ್ಮ ತಂದೆ ತಾಯಿಯ ಕರ್ತವ್ಯವಾಗಿದೆ. ಮೊದಲು ಕುಟುಂಬದಲ್ಲಿ ಬದಲಾವಣೆ ಆದರೆ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ. ಎಂದು ತಮ್ಮ ಕುಟುಂಬದಲ್ಲಿ ಆದ ಬದಲಾವಣೆಯ ಕುರಿತು ಉದಾಹರಣೆಯೊಂದಿಗೆ ಹಲವಾರು ವಿಷಯಗಳ ಬಗ್ಗೆ ಮಾಹಿತಿ ನೀಡಿದರು. ಮಹಿಳೆಯರೆಲ್ಲರೂ ನಾವು ಕೂಡ ನಮ್ಮ ನಮ್ಮ ಕುಟುಂಬಗಳಲ್ಲಿ ತಾರತಮ್ಯ ಮಾಡದೆ ಇಬ್ಬರಿಗೂ ಸಮಾನವಾದ ರೀತಿಯಲ್ಲಿ ನೋಡುತ್ತೇವೆ ಎಂದು ನಿರ್ಧರಿಸಿದರು.




## ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಸರ್ಕಾರಿ ಸೌಲಭ್ಯಗಳು 5% ಅನುದಾನ”



ಕಲಬುರ್ಗಿ ನಗರ ಪ್ರದೇಶದ ಚೇತನ ಕೇಂದ್ರದಲ್ಲಿ 22/04/2025 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ District level parents champion group meeting ಹಮ್ಮಿಕೊಳ್ಳಲಾಯಿತು. ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಕುಲ್ಕರ್ಣಿ ಅವರು ಸಭೆಯಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಇರುವ ಸರ್ಕಾರಿ ಸೌಲಭ್ಯಗಳನ್ನು ಯಾವರೀತಿ ಪಡೆದುಕೋಳಬೇಕು ಎಂಬುದರ ಕುರಿತು ಮಾಹಿತಿಯನ್ನು ನೀಡಿದರು. ಒಗ್ಗಟ್ಟಿನಲ್ಲಿ ಬಲವಿದೆ ನಾವೇಲರು ಕೂಡಿಕೋಂಡು ಮಕ್ಕಳಿಗೆ ಗ್ರಾಮಪಂಚಾಯಿತಿ 5% ಅನುದಾನ ಹಾಗೂ ವಿಕಲಚೇತನ ಪಿಂಚಣಿ ಮಾಡಿಸುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಇವೆಲ್ಲ ಸಮಸ್ಯೆಗಳು ನಾವೇಲ ಪಾಲಕರು ಒಂದುಗೂಡಿ ಆ ಯೊಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಶಿವಕಾಂತ, ಶ್ರೀಮತಿ ಜಗದೇವಿ, ಕು. ಅನಿತಾ ಅವರು ಹಾಗೂ 8 ಜನ ಪಾಲಕರು ಭಾಗವಹಿಸಿದ್ದರು.

## “ಸೇವಾ ಸಂಗಮ ಸಂಸ್ಥೆಯಿಂದ ಸಹಾಯ ಪಡೆದ ಕುಟುಂಬ”

ಮಹಮ್ಮದ ಆಕೀಬ್ ತಂದೆ ಮೂಹಮ್ಮದ ಇಲೀಯಾಸ್ ತಾಯಿ ಜಾಸಮಿನ ಮೋಮಿನಪೂರ್ ನಿವಾಸಿಯಾಗಿದ್ದಾರೆ. ತಂದೆ ಕೂಲಿ ಕೆಲಸದಲ್ಲಿದ್ದಾರೆ, ತಾಯಿ ಮಗುವಿಗೆ ನೋಡಿಕೊಂಡು ಮನೆಯಲ್ಲಿ ಇರುತ್ತಾರೆ. ಇವರಿಗೆ 5 ಜನ ಮಕ್ಕಳು ಇದ್ದಾರೆ. ಮಗು ಮಾಲಕೊಂಡಲೆ ಮಲಗುತ್ತಿದ್ದರು ಮಗುವಿಗೆ ಯಾವುದೇ ರೀತಿಯ ಚಟುವಟಿಕೆ ಬರುತ್ತಿರಲಿಲ್ಲ. ಮಗುವಿಗೆ ನಡೆಯುವ, ಕುಳಿತು ಕೊಳ್ಳುವ, ಮಾತು ಬರದೇ ಇರುವ ಸಮಸ್ಯೆ ಇದೆ. ಸೇವಾಸಂಗಮ ಸಂಸ್ಥೆ ವತಿಯಿಂದ ಸ್ಟ್ಯಾಂಡಿಂಗ್ಪ್ರೇಮ್, AFO, Getteಡಿ ಕೊಟ್ಟನಂತರ ಮಗುವಿಗೆ ಪ್ರತಿದಿನ ಚಟುವಟಿಕೆ ಮಾಡಿಸುವುದರಿಂದ ಮಗು ಪ್ರಸ್ತುತ 15 ನಿಮಿಷ ಕುಳಿತು ಕೊಳ್ಳುತ್ತಿದ್ದಾನೆ. ಸರ್ಕಾರದಿಂದ ಯುಡಿಐಡಿ ಕಾರ್ಡ್ಮಾಡಿಸಿಕೊಂಡಿದ್ದಾರೆ, ಮಗುವಿಗೆ ತಿಂಗಳಿಗೆ 2000 ರೂಪಾಯಿ ಬರುತ್ತಿವೆ. ನಮ್ಮ ಮಗುವಿಗೆ ಬಹಳ ಸಹಾಯವಾಗಿದೆ ಎಂದು ಮಗುವಿನ ಪೋಷಕರು ಸೇವಾಸಂಗಮ ಸಂಸ್ಥೆಗೆ ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ.



## “ಪೌಷ್ಟಿಕ ಆಹಾರ ಸದೃಢ ಆರೋಗ್ಯಕ್ಕೆ ಅವಶ್ಯಕ”

ದಿನಾಂಕ 12 ಏಪ್ರಿಲ ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜಿಂಪ್ರೇಮ್ಜಿ ಫೌಂಡೇಶನ್ನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ಕಲ್ಬುರ್ಗಿ ನಗರ ಪ್ರದೇಶದಲ್ಲಿರುವ ವಿದ್ಯಾನಗರ ಅಂಗನವಾಡಿ ಕೇಂದ್ರದಲ್ಲಿ ಸದೃಢ ಆರೋಗ್ಯಕ್ಕೆ ಪೌಷ್ಟಿಕ ಆಹಾರ ನಾವೆಲ್ಲರೂ ಜೀವಿಸಲು ಮತ್ತು ಬೆಳವಣಿಗೆಗೆ ಪೌಷ್ಟಿಕ ಆಹಾರಬೇಕು. ಪೌಷ್ಟಿಕ ಆಹಾರ ಪಡೆಯಬೇಕಾದರೆ ಉತ್ತಮವಾದ ಹಸಿ ತರಕಾರಿ, ತಾಜಾ ಹಣ್ಣುಗಳ ಸೇವನೆ ಮಾಡಬೇಕು. ಕಲಬೆರಿಕೆಯ ಆಹಾರ ಸೇವಿಸಬಾರದು, ಹೆಚ್ಚಾಗಿ ಹೊರಗಿನ ತಿಂಡಿಗಳನ್ನು ತಿನ್ನಬಾರದು, ಮನೆಯಲ್ಲಿ ತಯಾರಿಸಿದ ಆಹಾರವನ್ನು ಸೇವಿಸಬೇಕು ಎಂದು ಶ್ರೀಮತಿ ಶಿವಕಾಂತ ಮಾಹಿತಿ ತಿಳಿಸಿದರು ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಶರಣಮ್ಮ ಹಾಗೂ 9 ಜನ ಮಕ್ಕಳ ಪಾಲಕರು ಭಾಗವಹಿಸಿದರು.



## "ವಿಶೇಷ ಚೇತನರು ಸರಕಾರದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು"



ದಿನಾಂಕ 25 ಏಪ್ರಿಲ ರಂದು, ಸೇವಾಸಂಗಮ ಸಂಸ್ಥೆ ಹಾಗೂ ಅಜಿಂಪ್ರೇಮ್ಜಿ ಫೌಂಡೇಶನ್ನ ಸಂಯುಕ್ತ ಆಶ್ರಯದಲ್ಲಿ ವಿದ್ಯಾನಗರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು, ಗುರ್ತಿಸಿದ ನಂತರ ಮಕ್ಕಳಿಗೆ ವಿವಿಧ ಚಟುವಟಿಕೆ ಮಾಡುವದರ ಮುಖಾಂತರ ಅವರಲ್ಲಿರುವ ನ್ಯೂನ್ಯತೆಯ ತೀವ್ರತೆಯನ್ನು ಹಂತ ಹಂತವಾಗಿ ಕಡಿಮೆ ಮಾಡಬಹುದು. ಇಂತಹ ಮಕ್ಕಳಿಗೆ ಸರಕಾರದಿಂದ ವಿವಿಧ ಸೌಲಭ್ಯಗಳನ್ನು ದೊರೆಯುತ್ತವೆ ಎಂದು ಶ್ರೀಮತಿ ಶಿವಕಾಂತ ಅವರು ಮಾಹಿತಿ ತಿಳಿಸಿದರು. ಈ ಮಾಹಿತಿ ಕಾರ್ಯಕ್ರಮದಲ್ಲಿ 10 ಜನ ಮಹಿಳೆಯರು ಭಾಗವಹಿಸಿದರು.

## "ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಮಹತ್ವದ ಕುರಿತು ಟೆಂಟ್‌ಹೌಸ್ ಕಾರ್ಯಕ್ರಮ"



4 ಏಪ್ರಿಲ್ 2025 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್, ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಗರೂರ್ಬಿ ಗ್ರಾಮದಲ್ಲಿ ಶ್ರೀವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಮಹತ್ವದ ಕುರಿತು ಟೆಂಟ್‌ಹೌಸ್ ಕಾರ್ಯಕ್ರಮವನ್ನು ಮಾಡಲಾಯಿತು. ಮಗುವಿನ ಕತ್ತು ಮೂರು ತಿಂಗಳಿಗೆ ನಿಲ್ಲದಿರುವುದು, ಆರು ತಿಂಗಳಿಗೆ ಮಗು ಹೊರಳಾಡುವುದು, ಕುಳಿತುಕೊಳ್ಳಬೇಕು, ಅಂದರೆ ಒಂದು ವರ್ಷದಲ್ಲಿ ಮಗು ಸ್ವತಂತ್ರವಾಗಿ ನಡೆಯಬೇಕು ಅಥವಾ ಸಹಾಯದ ಮೂಲಕ ನಡೆಯಬೇಕು ಈ ಎಲ್ಲಾ ಚಟುವಟಿಕೆಗಳು ಮಕ್ಕಳು ಮಾಡದಿದ್ದರೆ, ಮಗು ಬೆಳವಣಿಗೆಯಲ್ಲಿ ಕುಂಟಿತ ಹೊಂದಿದೆ ಎಂದು ತಿಳಿದ್ದುಬರುತ್ತದೆ. ಈ ಮೇಲಿನ ಎಲಾ ಲಕ್ಷಣಗಳು ಕಂಡು ಬಂದರೆ ಕರಪತ್ರದ ಮೇಲೆ ಇರುವ ನಂಬರ್ಗೆ ಫೋನ್ ಮಾಡಿ ತಿಳಿಸಿರಿ ಎಂದು ಕರಪತ್ರ ನೀಡುವುದರ ಮೂಲಕ ಕುಮಾರಿ ಲಕ್ಷ್ಮಿ ಅವರು ಒಟ್ಟು 60 ಜನ ಗ್ರಾಮಸ್ಥರಿಗೆ ಅರಿವು ಮೂಡಿಸಿದರು.

## "ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಮಾಹಿತಿ"



ಕಲಬುರ್ಗಿ ತಾಲೂಕಿನಲ್ಲಿ ಬರುವ ಕಲಬೆನ್ನೂರ್ ಗ್ರಾಮದ ಮಹಿಳೆಯರಿಗೆ ಏಪ್ರಿಲ್ 17 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಮಾಹಿತಿಯನ್ನು ಶ್ರೀಮತಿ ದಾಕ್ಷಾಯಣಿ ಅವರು ನೀಡಿದರು. ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳ ನ್ಯೂನತ್ತೆ ಕಾರಣಗಳ ಬಗ್ಗೆ ಹಾಗೂ ಅವರಿಗೆ ಸೇವಾಸಂಗಮ ಸಂಸ್ಥೆಯಿಂದ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೂರಕಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ 15 ಜನ ಉಪಸ್ಥಿತರಿದ್ದರು.

## "ವಿಶೇಷ ಚೇತನರ ಶಿಕ್ಷಣಕ್ಕೆ ಪ್ರೋತ್ಸಾಹಿಸಿ"




ಏಪ್ರಿಲ್ 9 2025 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ್ನ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚಿವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಕಲ್ಬುರ್ಗಿ ನಗರ ಪ್ರದೇಶದ ಶಿವಾಜಿನಗರ ಏರಿಯಾದ 6ನೇ ಅಂಗನವಾಡಿ ಕೇಂದ್ರದಲ್ಲಿ ಪಾಲಕರ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ವಿಕಲ ಚೇತನ ಮಕ್ಕಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು ಕುರಿತು ಮತ್ತು ಮಕ್ಕಳ ಶಿಕ್ಷಣದ ಕುರಿತು 2016ರ ವಿಕಲ ಚೇತನ ಮಕ್ಕಳಿಗೆ ಶಿಕ್ಷಣದ ಸೌಲಭ್ಯಗಳ ಕುರಿತು ಅವುಗಳನ್ನು ನಾವು ಯಾವರೀತಿ ಪಾಲಕರ ಒಗ್ಗಟಿನ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು ಎನ್ನುವದರ ಕುರಿತು ಚರ್ಚೆ ಮಾಡಲಾಯಿತು. ಈ ಸಭೆಯಲ್ಲಿ EI n EE ಕಾರ್ಯಕರ್ತೆಯಾದ ಶ್ರೀಮತಿ ಶಿವಕಾಂತ, ಶ್ರೀಮತಿ ವಿಜಯಲಕ್ಷ್ಮಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಶರಣಮ್ಮ ಮತ್ತು 7 ಜನ ಪಾಲಕರು ಉಪಸ್ಥಿತರಿದ್ದರು.

## “ಟ್ಯೂಷನ್ಸ ಸ್ಕೂಲ್ ಮಕ್ಕಳಿಗೆ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ”



ದಿನಾಂಕ 23.4.2025 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜಿಂಪ್ರೇಮ್ಜಿ ಫೌಂಡೇಶನ್ನ ಸಂಯುಕ್ತ ಆಶ್ರಯದಲ್ಲಿ  ಕಲ್ಬುರ್ಗಿ ನಗರದ ದುಬೈ ಕಾಲೋನಿ ಏರಿಯಾದ ಟ್ಯೂಷನ್ಸ ಸ್ಕೂಲ್ ಮಕ್ಕಳಿಗೆ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು, ಹುಟ್ಟಿನಿಂದ 6 ವರ್ಷದ ಒಳಗಡೆ ಇರುವ ವಿಶೇಷ ಚೈತನಯುಳ್ಳ ಮಕ್ಕಳ ಅಥವಾ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಪತ್ತೆಹಚ್ಚಿ ಆ ಮಕ್ಕಳಿಗೆ ವಿವಿಧ ಚಟುವಟಿಕೆಗಳ ಮೂಲಕ ಬದಲಾವಣೆಗೊಳಿಸುವ ಈ ನಮ್ಮ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಈ ಸಭೆಮೂಲಕ ಶ್ರೀಮತಿ ವಿಜಯಲಕ್ಷ್ಮಿ ತಿಳಿಸಿದರು.

## “ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾಸಂಘಮ ಸಂಸ್ಥೆ ಕಾರ್ಯಕ್ರಮಗಳು”

ದಿ ಡೈಲಿ ನ್ಯೂಸ್

### ಮಾನಸಿಕ ಅಸ್ವಸ್ಥರಿಗೆ ಸ್ವಯಂ ಆತ್ಮವಿಶ್ವಾಸ ಬೇಕು

• ದಿ ಡೈಲಿ ನ್ಯೂಸ್ ಹುಮನಾಬಾದ್

ಪಟ್ಟಣದ ಹೊರ ವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಂಯುಕ್ತ ಆಶ್ರಯದೊಂದಿಗೆ ಮಾನಸಿಕ ಅಸ್ವಸ್ಥರಿಗೆ ಹಾಗೂ ಅವರ ಪೋಷಕರಿಗೆ ಶುಕ್ರವಾರ ಮತ್ತು ಶನಿವಾರ ಎರಡು ದಿವಸದ ವಸತಿ ಸಹಿತ ಶಿಬಿರ ಆಯೋಜಿಸಲಾಗಿತ್ತು.

ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಮಾತನಾಡಿ, ಅನಾರೋಗ್ಯ ಎಂಬುವುದು ವ್ಯಕ್ತಿ ಹಾಗೂ ಕುಟುಂಬಕ್ಕೆ ನೋವನ್ನುಂಟು ಮಾಡುವ ಸಂಗತಿಯಾಗಿದೆ, ಪ್ರತಿ ಸಮಸ್ಯೆಗೆ ಸೂಕ್ತವಾದ ಪರಿಹಾರ ಇದ್ದೇ ಇರುತ್ತದೆ. ಆ ಪರಿಹಾರವನ್ನು ಹುಡುಕಬೇಕು. ಮಾನಸಿಕ ಒತ್ತಡಕ್ಕೆ ಒಳಗಾಗಿರುವ ವ್ಯಕ್ತಿಗಳು ಸ್ವಯಂ ಪ್ರೇರಿತರಾಗಿ ಆತ್ಮವಿಶ್ವಾಸದಿಂದ ಮುನ್ನಡೆಯಬೇಕು. ಕುಟುಂಬಸ್ಥರು ಅವರಿಗೆ ಸಹಕಾರ ನೀಡಿ ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿ ಡಾ.ಶಾಂತಕುಮಾರ ಸಿದ್ದೇಶ್ವರ,



ನವ ಜೀವನ ಕಾರ್ಯಕ್ರಮದ ಕಾರ್ಯಕರ್ತ ಅರುಣ್ ಕುಮಾರ್ ರಂಜೇರಿ, ಸಹ ಆಪ್ತ ಸಮಾಲೋಚಕ ರವಿ ಅವರು ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು. 30 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಸಂಸ್ಥೆಯ ಸಹ ನಿರ್ದೇಶಕ ಫಾದರ್ ವಿಜಯ್, ಸಂಯೋಜಕ ಪ್ರವೀಣ್, ಆಪ್ತ ಸಮಾಲೋಚಕ ಅರುಣಕುಮಾರ ಕೋಟೆ, ಸಿಸ್ಟರ್ ಕ್ರಿಸ್ಟಿನ, ಪೂಜಾ, ಪ್ರೀತಿ, ಮಮತಾ, ಡೇವಿಡ್ ಇದ್ದರು.

KALABURGI Edition
Apr 13, 2025 Page No. 1

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.




**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in